## ಮನಮೆಚ್ಚಿದ 'ನಿಮ್ಮ ಪುಟ'

ಡಿಸೆಂಬರ್ 14ರ ಸಂಚಿಕೆಯ 'ನಿಮ್ಮ ಪುಟ' ತುಂಬಾ ಆಸಕ್ತಿದಾಯಕವಾಗಿದೆ. ಬೀರಣ್ಣ ನಾಯಕ ಅವರ 'ಅವ್ವನ ನಾಯಿ ಬಾಣಂತನ'ವನ್ನಂತೂ ಕಣ್ಣಿಗೆ ಕಟ್ಟಿದ ಹಾಗೆ ಬರೆದಿದ್ದಾರೆ ಹಾಗೂ 'ಸಬೂಬಿಗಿಲ್ಲ ಅವಕಾಶ', 'ಕಾಫಿ ಪುಡಿ ಮಷೀನ್', 'ಜೋಕುಮಾರ', 'ಡ್ರ್ಯಾಗನ್ ಗಿಡ'... ಎಲ್ಲ ಪುಟ್ಟ ಬರಹಗಳೂ ತುಂಬಾ ಇಷ್ಟವಾದವು.

—ಉಷಾ

## ಒಪೆರಾ ಹೌಸ್‌ನ ವಿಶೇಷ

'ಒಪೆರಾ ಹೌಸ್' (ಡಿ. 14, ಸಿ.ಜಿ. ಮಂಜುಳಾ) ಕುರಿತ ಪ್ರವಾಸ ಲೇಖನ ಉತ್ತಮ ಮಾಹಿತಿಯನ್ನು ಒಳಗೊಂಡಿದೆ. ಮತ್ತೂ ಒಂದು ವಿಶೇಷತೆ ಅಲ್ಲಿದೆ. ಅದೇನೆಂದರೆ, ಒಳಗಿನ ಸಭಾಂಗಣದಲ್ಲಿ ಅತಿ ಕಡಿಮೆ ಧ್ವನಿಯಲ್ಲಿ ಮಾತನಾಡಿದರೂ (ಧ್ವನಿವರ್ಧಕವಿಲ್ಲದೆ) ಇಡೀ ಸಭಾಂಗಣಕ್ಕೆ ಕೇಳಿಸುತ್ತದೆ. ಇದನ್ನು ಧ್ವನಿಗತಿ ವಿಜ್ಞಾನದಿಂದ ಸಾಧಿಸಿದ್ದಾರೆ! ನಮ್ಮ ಭೇಟಿಯಲ್ಲಿ ಇದನ್ನು ಗಮನಿಸಿದ್ದೆವು.

—ಪ್ರೊ. ಎಸ್.ಆರ್. ದೇವಪ್ರಕಾಶ್, ತುಮಕೂರು



## ಯಮುನೆಯಲ್ಲ ಯಶೋದೆ...

'ತ್ರೇತಾಯುಗದ ಸೀತಾ ಅಶೋಕವೂ ದ್ವಾಪರದ ಕದಂಬವೂ' (ಡಿ. 14, ವಿನು ಗಂಗೆ) 'ಮರಗಳ ಕಥೆ' ಲೇಖನ ಅಚ್ಚುಕಟ್ಟಾಗಿ ಮೂಡಿಬಂದಿದೆ. ಆದರೆ ಕೆಲವು ಲೋಪಗಳಿವೆ. ಮೊದಲನೆಯದಾಗಿ, 'ಯಮುನೆ ಕೃಷ್ಣನನ್ನು ಒರಳಿಗೆ ಕಟ್ಟಿ ಹಾಕಿದಾಗ' ಎಂದಿರುವುದು 'ಯಶೋದೆ ಕೃಷ್ಣನನ್ನು ಒರಳಿಗೆ ಕಟ್ಟಿ ಹಾಕಿದಾಗ' ಎಂದಾಗಬೇಕಿತ್ತು.

ಎರಡನೆಯದಾಗಿ, 'ಕವಿರತ್ನ ಕಾಳಿದಾಸ' ಚಲನಚಿತ್ರದ 'ಮಾಣಿಕ್ಯ ವೀಣಾ ಮುಘಲಾಲಯಂತೀ' ಎಂದಿರುವುದು 'ಮಾಣಿಕ್ಯ ವೀಣಾಂ ಉಪಲಾಲಯಂತೀಂ' ಅಥವಾ 'ಮಾಣಿಕ್ಯ ವೀಣಾಮುಪಲಾಲಯಂತೀಂ' ಎಂದಾಗಬೇಕಿತ್ತು.

—ಡಿ. ಜನಾರ್ದನ

## ಮರೆಯಲಾಗದ ಟೀ ಪಾರ್ಟಿ

'ಚಹಾ ಕಪ್‌ನಲ್ಲಿ ಚಂಡಮಾರುತ' (ಡಿ. 14, ಜಿ. ನಾಗೇಂದ್ರ ಕಾವೂರು) ಲೇಖನ ನಾವು ಶಾಲಾ ದಿನಗಳಲ್ಲಿ ಓದಿದ ಪಾಠವನ್ನು ಮೆಲುಕು ಹಾಕುವಂತೆ ಮಾಡಿತು. 'ಬೋಸ್ಟನ್ ಟೀ ಪಾರ್ಟಿ' ಘಟನೆಗೆ 250 ವರ್ಷಗಳು ಸಂದ ಸಂದರ್ಭದಲ್ಲಿ ಪ್ರಕಟಗೊಂಡ ಲೇಖನ ಸೊಗಸಾಗಿದೆ.

—ವಿಜಯಕುಮಾರ್ ಎಂ.ಎಸ್., ಬೆಂಗಳೂರು

## ಪ್ರಕೃತಿಯ ವಿಸ್ಮಯ

'ಕಗ್ಗತ್ತಲ ಮಂಥನ ಅಮೃತ ಸಿಂಚನ' (ಡಿ. 14, ಗುರುರಾಜ್ ಎಸ್. ದಾವಣಗೆರೆ) ಲೇಖನ ಸಮಯೋಚಿತವಾಗಿದೆ. ಪ್ರಕೃತಿಯ ಸವಾಲುಗಳಿಗೆ ಮಾನವ ಪ್ರಯತ್ನಗಳು ಹಾಗೂ ಅವುಗಳಿಗೆ ಸಿಗುವ ಪ್ರತಿಫಲಗಳು ವಿಸ್ಮಯಕಾರಿ ಎಂದರೆ ಅತಿಶಯೋಕ್ತಿಯಲ್ಲ.

ಮಾನವನಲ್ಲಿರುವ ಅಗಾಧ ಅಂತಃಶಕ್ತಿಯ ಪರಿಚಯವಾಗುವುದು ಇಂಥ ಸಂದರ್ಭಗಳಲ್ಲಿಯೇ. ಪ್ರಾರ್ಥನೆ ಕೂಡ ಅಂತಃಶಕ್ತಿಯ ಒಂದು ಭಾಗವೇ. ಲೇಖಕರು ಉದಾಹರಿಸಿದ ಎಲ್ಲಾ ರಕ್ಷಣಾ ಕಾರ್ಯಗಳಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ, ಯಂತ್ರಗಳಿಗೂ, ಸಮೀರ್ ಕರಿಂಬನಂತಹ ಸ್ವಯಂಸೇವಕರಿಗೂ, ಪ್ರಾರ್ಥಿಸಿದ ಅಸಂಖ್ಯಾತ ಜೀವಿಗಳಿಗೂ ನಮಸ್ಕಾರ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ

## ನಿಜವಾದ ಹೀರೊಗಳು

ಲೇಖನ ಮನಮುಟ್ಟುವಂತಿತ್ತು. ವಿವಿಧ ದೇಶಗಳಲ್ಲಿ ನಡೆದ ಕಾರ್ಯಾಚರಣೆಗಳು ಮತ್ತು ಆ ಸಂದರ್ಭದಲ್ಲಿ ಸಿಲುಕಿಕೊಂಡವರ ಬಗ್ಗೆ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಲೇಖನದಲ್ಲಿ ವಿವರಿಸಿದ ಸಂಗತಿಗಳು ಮೈನವಿರೇಳಿಸಿದವು. ಆ ಎಲ್ಲಾ ಕಾರ್ಯಾಚರಣೆಯಲ್ಲಿ ಸಾಹಸ ಮೆರೆದವರಿಗೆ ಮತ್ತು ಮೊನ್ನೆ ಮೊನ್ನೆ ಉತ್ತರಕಾಶಿಯಲ್ಲಿ ಕಾರ್ಮಿಕರನ್ನು ರಕ್ಷಿಸಿದ ನಮ್ಮ ದೇಶದ ರಿಯಲ್ ಹೀರೊಗಳಿಗೂ ಒಂದು ಸಲ್ಯೂಟ್.

—ಬಿಜೆ ಪಾರ್ವತಿ ವಿ. ಸೋನಾರೆ, ಬೀದರ್




## ರೋಮಾಂಚಕ ಕಾರ್ಯಾಚರಣೆ

ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ ಬಡಕೋಟ್ ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರನ್ನು ರಕ್ಷಿಸಿದ ಕಾರ್ಯಾಚರಣೆ ರೋಮಾಂಚನ ಮೂಡಿಸುವಂಥದ್ದು. ಈ ಯಶಸ್ಸು ಕೋಟಿ ಕೋಟಿ ಭಾರತೀಯರ ಪ್ರಾರ್ಥನೆಯ ಫಲ. ಕತ್ತಲ ಆಳದಲ್ಲಿ ಮೂಡಿದ ಬೆಳ್ಳಿ ಬೆಳಕಿನ ಚಿತ್ರಗಳು ಮನಸೂರೆಗೊಂಡವು. ಕಾರ್ಮಿಕರ ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರಗಳು ಹೆಚ್ಚು ಒತ್ತು ನೀಡಲಿ.

—ಲಕ್ಷ್ಮಣ್ ರಾವ್ ಎಂ.ಎಲ್., ದಾವಣಗೆರೆ

## ಪಾಠ ಕಲಿಯಬೇಕಿದೆ

ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರು 17 ದಿನಗಳ ನಂತರ ಸುರಕ್ಷಿತವಾಗಿ ಪಾರಾಗಿದ್ದು ನಮಗೆ ಕೆಲವು ಪಾಠಗಳನ್ನು ಕಲಿಸಿದೆ. ಬೃಹತ್ ಯಂತ್ರಗಳು ಕೈಕೊಟ್ಟಾಗ ಇಲಿ ಬಿಲ ಕೊರೆಯುವ ಸಾಂಪ್ರದಾಯಿಕ ವಿಧಾನ ಕೈ ಹಿಡಿಯಿತು. ರಕ್ಷಣಾ ಪಡೆಗಳು ಸಂಭಾವನೆ ನಿರಾಕರಿಸಿ ಮಾನವೀಯತೆ ಮೆರೆದಿದ್ದಾರೆ.

—ಮುಕುಂದ ಹೆರಕಲ್, ಬೆಂಗಳೂರು




## ವರ್ತಮಾನಕ್ಕೆ ಹಿಡಿದ ಕನ್ನಡಿ

'ಯುದ್ಧ, ಸಂಧಾನ ಮತ್ತು ಹರಿದ ಚಪ್ಪಲಿ' (ಡಿ. 14, ಕೇಶವರೆಡ್ಡಿ ಹಂದ್ರಾಳ) ಕಥೆ, ದೇಶ ಆಳುವವರ ಕ್ರೂರತನದ ಪರಮಾವಧಿಯ ಸ್ಪಷ್ಟ ಚಿತ್ರಣ ಕಟ್ಟಿಕೊಡುತ್ತದೆ. ಅಮಾಯಕ ಜನಸಾಮಾನ್ಯರ ಹೆಣಗಳುರುಳುತ್ತಿದ್ದರೂ ದೇಶದ ನಾಯಕರೆನ್ನಿಸಿಕೊಂಡವರು ಮೋಜು ಮಸ್ತಿ, ವೈಭವಗಳ ಮತ್ತಿನಲ್ಲಿ ಮೆರೆಯುತ್ತಿರುತ್ತಾರೆ. ಕುಟುಂಬದ ಆಸ್ತಿ ಕಲಹದಲ್ಲಿ ಅಣ್ಣತಮ್ಮಂದಿರ ಜಗಳ ಕೊಲೆಯಲ್ಲಿ ಪರ್ಯವಸಾನವಾಗುವಂತೆ, ದೇಶದ ಮೂರ್ಖನಾಯಕರು ಉಭಯ ದೇಶಗಳ ಜನರನ್ನು ಪ್ರಚೋದಿಸಿ 'ಯುದ್ಧ'ವೆಂಬ ಸಾವಿನ ಮನೆಗೆ ನೂಕಿ, ಸೋಲೋ ಗೆಲುವೋ ಎಂಬ ಜೂಜಾಟದ ನಶೆಯಲ್ಲಿರುತ್ತಾರೆ.

'ಆಳುವವರು ಮೂರ್ಖರಾಗಿರುತ್ತಾರೆ. ಜನ ಎಷ್ಟು ಬುದ್ಧಿವಂತರಾಗಿದ್ದರೂ ಮೂರ್ಖರಿಂದ, ದುರುಳರಿಂದ ಆಳಲ್ಪಡುತ್ತೇವೆ. ಮೂರ್ಖರು ತಮ್ಮನ್ನು ಸೃಷ್ಟಿಸಿದ ದೇವರ ಮಾತನ್ನೂ ಕೇಳುವುದಿಲ್ಲ' —ಯುದ್ಧ ಸಂತ್ರಸ್ತನೊಬ್ಬನ ನೋವಿನ ನುಡಿಗಳು ಕಥೆಯ ಜೀವಾಳವೆನಿಸಿವೆ. ಹರಿದ ಚಪ್ಪಲಿಗಳೇ ನಿಜವಾದ ಬಾಂಬುಗಳು. ಇಂದಿನ ಯುದ್ಧನಿರತ ದೇಶಗಳ ಸಂದರ್ಭದಲ್ಲಿ ಈ ಕಥೆ ಪ್ರಸ್ತುತವೆನಿಸುತ್ತದೆ.

—ವೀರಭದ್ರ, ರಟ್ಟಿಹಳ್ಳಿ, ಹುಬ್ಬಳ್ಳಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in